ಭೇಟಿಯಾಗುವ, ಅವರ ಜೊತೆ ಹರಟುವ ಅವಸರಗಳು ನನಗೆ ಸಿಕ್ಕವು. ಆಗ ಮಾಡುತ್ತಿದ್ದ ಮಾತುಕತೆಯ ಕೆಲವು ಭಾಗಗಳು ಹೀಗಿವೆ:

◆ **ನೀವು 'ಕಾಮರೂಪಿ' ಹೆಸರು ಇಟ್ಟುಕೊಳ್ಳಲಿಕ್ಕೆ ಏನು ಕಾರಣ?**

ಸ್ವಾಮೀ, ನಾನು ಕಾಮರೂಪದವನು. ಅಸ್ಸಾಮಿ ಈಸ್ ಕಾಮರೂಪಿ. ಆಸಾಮಿ ಯಾರಂತ ಗೊತ್ತಾಗೋಲ್ಲ. ಈಗಲೂ ಇವನ ಕುಲ ಗೋತ್ರ ಯಾರಿಗೂ ಗೊತ್ತೇ ಇಲ್ಲ.

◆ **ನೀವು ಅಸ್ಸಾಮಿನಿಂದ ಬರೆದ ಪತ್ರದಲ್ಲಿ, 'ನಾನು ಇಲ್ಲೇ ಸಾಯಬೇಕು ಅಂತ ಬಯಸುತ್ತೇನೆ' ಅಂತ ಒಂದು ಸಾಲಿತ್ತು. ಅಸ್ಸಾಂ ಅಷ್ಟೊಂದು ನಿಮ್ಮನ್ನು ಆವರಿಸಿಕೊಂಡಿದೆಯೇ?**

ನಾನು ಕನ್ನಡ ಭಾಷೆ ಇನ್ನೂ ತೊದಲ್ತೀನಿ. ಎಷ್ಟು ಇಂಗ್ಲಿಷ್ ಮಿಕ್ಸ್ ಮಾಡ್ತಾ ಇದ್ದೀನಿ ನೋಡಿ. ಆದರೆ ಅಸ್ಸಾಮಿನಲ್ಲಿ ನಿರರ್ಗಳವಾಗಿ ಒಂದು ಇಂಗ್ಲಿಷ್ ಶಬ್ದಾನೂ ಉಪಯೋಗಿಸದೇ ಮಾತಾಡ್ತೀನಿ. ಬೆಂಗಾಲೀನೂ ಅಷ್ಟೇ. ನಾನು ಅಸ್ಸಾಮೀಸ್ ಹೊರಗಿನಿಂದ ಹೋಗಿ ಕಲಿತವನು. ಇಟ್ಸ್ ಎ ಬ್ಯೂಟಿಫುಲ್ ಲಾಂಗ್ವೇಜ್. ಪೊಯಿಟಿಕ್ ಲಾಂಗ್ವೇಜ್. ಮ್ಯೂಸಿಕಲ್ ಆಲ್ಸೊ. ಯುನೊ, ದ ಮೋಸ್ಟ್ ಕಾಂಪ್ಲೆಕ್ಸ್ ಎಮೋಶನ್ – ಥಾಟ್ ಒಂದು ಲೈನಲ್ಲಿ ಎಷ್ಟು ಕ್ಲೀನ್ ಆಗಿ ಬರುತ್ತೆ ಅದರಲ್ಲಿ.

◆ **ನಿಮ್ಮ ಸಮುದಾಯಕ್ಕೆ ವಿಶಿಷ್ಟವಾದ ಭಾಷೆಯಿದೆ ಎಂದು ಕೇಳಿದ್ದೇನೆ.**

ಎ ಲಾಂಗ್ವೇಜ್ ಸ್ಪೋಕನ್ ಇನ್ ಸ್ಮಾಲ್ ಕಮ್ಯುನಿಟಿ. ಕೋಲಾರ, ಬೆಂಗಳೂರು, ಸರ್ಜಾಪುರ, ಮಾಲೂರು, ಆನೇಕಲ್. ಅದು ಯಾರಿಗೂ ಗೊತ್ತಿಲ್ಲ. ನನಗೊಬ್ಬನಿಗೆ ಗೊತ್ತಿರೋದು.

◆ **ಕೋಲಾರದಲ್ಲಿ ನಿಮ್ಮ ಬಾಲ್ಯ ಯಾವ ತರಹದಲ್ಲಿತ್ತು?**

ಈ ಕಠಾರಿಪಾಳ್ಯದಲ್ಲಿ ನಮ್ಮದೊಂದೇ ಬ್ರಾಹ್ಮಣರ ಮನೆ. ಸುತ್ತ ಒಕ್ಕಲಿಗರು, ಸಾಬರು, ತಿಗಳರು, ಕುರುಬರು. ಇಲ್ಲೊಂದು ವಠಾರ ಇತ್ತು. ಇಲ್ಲಿ ಸುಗ್ರೇಶ ಅಂತ ಒಬ್ಬ ಇದ್ದ, ನನ್ನ ಕ್ಲಾಸ್‌ಮೇಟ್. ಅವರದು ಕಂಬಳಿ ಫ್ಯಾಕ್ಟರಿ ಇತ್ತು. ಕಂಬಳಿ ನೇಯ್ತಾ ಇದ್ದರು. ಕೈಮಗ್ಗ ಇತ್ತು. ಹುಣಸೆ ಬೀಜದಿಂದ ಗಂಜಿ ಮಾಡಿ ಅದನ್ನು ಒತ್ತಿ ಪೇಸ್ಟ್ ಮಾಡಿ, ಅದಕ್ಕೆಲ್ಲ ಹಚ್ಚಿಟ್ಟು ಡ್ರೈ ಮಾಡೋರು. ನಮ್ಮಣ್ಣ–ನಾನು ಅದೇ ಕಂಬಳಿ ಹೊದ್ದುಕೊಳ್ತಿದ್ವಿ.

◆ **ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕಲಿತವರು ನೀವು. ಅಲ್ಲಿಯ ನೆನಪುಗಳ ಬಗ್ಗೆ ಹೇಳಿ.**

ನನ್ನ ಕ್ಲಾಸ್‌ಮೇಟ್ ಸುಮತೀಂದ್ರ ನಾಡಿಗ. ರಾಜೀವ್ ತಾರಾನಾಥ ನನಗಿಂತ ಸೀನಿಯರ್, ಮೈಸೂರಿನಲ್ಲಿ ಎಂ.ಎ. ಮಾಡಿದ. ನನ್ನ ಕ್ಲಾಸ್‌ಮೇಟ್ ನಜೀರ್ ಅಹಮದ್ ಅಂತ ಇದ್ದ, ತುಮಕೂರಿನವನು. ಲಂಕೇಶ್ ಎರಡು ವರ್ಷ ಜೂನಿಯರ್.

◆ **ಕನ್ನಡ ಸಾಹಿತ್ಯದಲ್ಲಿ ನಿಮಗೆ ಅಭಿರುಚಿ ಶುರುವಾಗಿದ್ದು ಹೇಗೆ?**

ಬಿ.ಎ. ಆನರ್ಸ್‌ನಲ್ಲಿ ಇಬ್ಬರು ಮೇಷ್ಟ್ರು – ಜಿ.ಪಿ. ರಾಜರತ್ನಂ ಮತ್ತು ವಿ.ಸೀ. ಗುಡ್ ಸ್ಕಾಲರ್ಸ್ ಇನ್ ಕನ್ನಡ. ವಿ.ಸೀ. ರಿಯಲಿ ಸಾಫ್ಟ್ ಮ್ಯಾನ್. ಬಹಳ ಸೆಂಟಿಮೆಂಟಲ್. ರಾಜರತ್ನಂ ಈಸ್ ವೆರಿ ಸ್ಟ್ರಿಕ್ಟ್. ಹಿ ವಾಸ್ ನೆವರ್ ಫ್ರೆಂಡ್ಲಿ. ನಾನು ಅವರ ಮನೆಗೆ ಹೋಗ್ತಿದ್ದೆ. ದೊಡ್ಡ ಪ್ರೊಫೆಸರ್ ಆದರೂ, 'ಬಾಪ್ಪ ಪ್ರಭಾಕರ, ಕೂತುಕೋಪ್ಪ' ಅಂತ ಮಾತಾಡಿಸ್ತಿದ್ರು. ನನಗೆ ಚೆನ್ನಾಗಿ ಜ್ಞಾಪಕವಿದೆ. 1954ನೇ ಇಸವಿ. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾವೆಲ್ಲ ವಿ.ಸೀ.ಯವರ ಜತೆ ಮೈಸೂರಿಗೆ ಹೋಗಿದ್ವಿ. ಶಿವರಾಮ ಕಾರಂತರು ಸಮ್ಮೇಳನದ ಅಧ್ಯಕ್ಷರು. ಜಯಚಾಮರಾಜೇಂದ್ರ ಒಡೆಯರ್ ಉದ್ಘಾಟನೆ ಮಾಡಿ ಕನ್ನಡದಲ್ಲಿ ಮಾತಾಡಿದರು. ಸಮ್ಮೇಳನದಲ್ಲಿ ರಾಜರತ್ನಂ ಸಿಕ್ಕರು. ಹಿ ವಾಸ್ ಸೋ ಎಮೋಶ್‌ನಲ್ – ರಾಜಹಸ್ತಸ್ಪರ್ಶ ಆಯಿತು ಅಂತ. ಐ ನೆವರ್ ಫರ್ಗೆಟ್ ದಟ್ ಮೂಮೆಂಟ್.

◆ **ಇಂಗ್ಲಿಷ್ ಸಾಹಿತ್ಯ ಕಲಿಸಿದ ಮೇಷ್ಟ್ರುಗಳು ಯಾರ‍್ಯಾರು?**